ಮೈಸೂರ ಗೆಜೆಟ್.

ನಂ. 5] ಸರ್ಕಾರವಿಂದ ಘಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಫಿಬ್ರವರಿ ತಾ॥ 14, ಸ್ ೯೫ 1895.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜ್‌ರು, ಡಿ॥ ಡೆಪ್ಯೂಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ, ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ—ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದ್ದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಷ್ನಗಳು ವ ರೆಗ್ಯುಲೇಷರ್ಣಗಳು.—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

ಈ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ತಾರೀಖು 20ನೇ ಡಿಸೆಂಬರ್ 1894.

ನಂ. 10510.—ಆರ್. ಎಫ್. 147 92.—ಮೈಸೂರ ಶ್ರೀಮನ್ ಮಹಾರಾಜಾ ಸರ್ಕಾರದವರು ಆಜ್ಞಾಪಿಸುವದೇನಂದರೆ, ಮೈಸೂರ ಲ್ಯಾಂಡ್ ರೆವಿನ್ಯೂ Xನೇ ರೂಲ್ 4ನೇ ಪ್ಯಾರಾಕ್ಕೆ ಬದಲಾಗಿ ಇದರಡಿ ಬರುವದನ್ನು ಉಪಯೋಗಿಸತಕ್ಕದ್ದು:—

"4. ಲೋಕಲ್‌ಫಂಡು ಇಲಾಖೇಯವರು ಪಬ್ಲಿಕ್ ವರ್ಕ್ಸ್ ಇಲಾಖೇಯವರು ಮತ್ತು ಇತರ ಸರ್ಕಾರದ ಇಲಾಖೇಯವರು, ವ ಮ್ಯುನಿಸಿಪಾಲಿಟಿಯವರು ಆಥವಾ ಅವರುಗಳ ಕಂಟ್ರಾಕ್ಟುದಾರರು ಹಾಂಗೆ ಮಾಡುವದಕ್ಕೆ ವಿಶೇಷತಃ ಅಧಿಕಾರ ಕೊಡಲ್ಪಟ್ಟರೆ ಅವರು ಗವರ್ಮೆಂಟಿನಿಂದ ವಿಧಿನೋಣಾಗುವ ಅಂಥಾ ರಾಜಪಾಲು ಮೊಬಲಗನ್ನು ತೆರುವದಕ್ಕೆ ಬೆಳಪಟ್ಟು ನದಿಗಳ, ನಾಲಾಗಳ ಅಥವಾ ಸರ್ಕಾರ್ ಕೆರೆಗಳ ಅಂಗಳಗಳಿಂದಲಾಗಲಿ, ಸರ್ಕಾರ್ ಕೆಲಸಗಳಿಗೆ ಪ್ರಜೆಗಳ ಉಪಯೋಗಾರ್ಥವಾದ ವಿಶೇಷ ಕೆಲಸಗಳಿಗೋಸ್ಕರ

ಗೊತ್ತು ಮಾಡಲ್ಪಡದಂಥಾ ಆಕಾರ ಕಾಣದ ಅಥವಾ ಹಿಡುವಳೀಲಿ ಯಿಲ್ಲದ ಜಮೀನಿನಿಂದಲಾಗಲಿ ಮಣ್ಣು, ಕಲ್ಲು, ಕಂಕರ್, ಮರಳು, ಮರಂಮತ್ತು ಇತರ ಪದಾರ್ಥಗಳನ್ನು ಸಾಗಿಸಬಹುದು; ಪರಂತು ಡೆಪ್ಯೂಟಿ ಕಮ್ಮಿಷನರವರು ಸದರೀ ಪದಾರ್ಥಗಳು ಈ ರೂಲಿಗನು ಸಾರವಾಗಿ ಗೊತ್ತಾದ ಪ್ರದೇಶಗಳಿಂದ ಸಾಗಿಸಲ್ಪಡಕೂಡದೆಂದು ನಿಷೇಧಿಸಬಹುದು. ಅಥವಾ ಅವರಿಗೆ ಯುಕ್ತವಾಗಿ ಕಾಣಬರುವ ಷರತ್ತುಗಳನ್ನು ವಿಧಿಸಬಹುದು."

ತಾರೀಖು 19ನೇ ಜನವರಿ 1895.

ನಂ. 11096.—ಯಲ್. ಎಫ್. 257—92—1894ನೇ ಇಸವಿ ಮೈಸೂರು ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಪ್ರಕಾರ ಇದರಿಂದ ಪ್ರಕಟಪಡಿಸುವದೇನಂದರೆ, ಇದರಡಿ ಕಂಡ ಜಮೀನ್‌ಗಳು ಸರ್ಕಾರ್ ಕೆಲಸಕ್ಕೆ ಅಂದರೆ ದೇವನಹಳ್ಳಿ ತಾಲ್ಲೂಕು ವಡಗೇನಹಳ್ಳಿ ಮ್ಯುನಿಸಿಪಲ್ ಟವನಿನಲ್ಲಿ ಯಿರುವ ರಸ್ತೆಯನ್ನು ಬಡಾಯಿಸುವದಕ್ಕೆ ಬೇಕಾಗಿರುತ್ತೆ:—

ಜಿಲ್ಲೆ.	ತಾಲ್ಲೂಕು.	ಗ್ರಾಮ.	ಹಿಡುವಳಿದಾರ್ರ ಹೆಸರು.	ಜಮೀನ್ ತಫ್ಸೀಲ್. ವಿವರ.	ಸರ್ವೆ ನಂ.	ವಿಸ್ತೀರ್ಣ.	ಕಂದಾಯ.	ಚಕ್ಕುಬಂದಿ.
						ಅಡಿ	ರೂ. ಆ. ಪೈ.	
ಬೆಂಗಳೂರು	ದೇವನಹಳ್ಳಿ	ವಡಗೇನಹಳ್ಳಿ	1 ಬಾಗಲೂರು ಮುದ್ದಣ್ಣ	ಮನೆ ಮುಂದುಗಡೆಯಲ್ಲಿರುವ ಜಗಲಿಯ ಭಾಗ	..	39 × 6	..	ಪೂರ್ವಕ್ಕೆ—ಮಾಲೀಕನಮನೆಯ ಮುಖ್ಯವಾದ ಕಟ್ಟಡ ಪಶ್ಚಿಮಕ್ಕೆ—ರೆಡ್ಡಿ ಪ್ಯಾಟೆಗೆ ಹೋಗುವ ರಸ್ತೆ ಉತ್ತರಕ್ಕೆ—ರುದ್ರಪ್ಪನ ಮನೆಯ ಪಡಸಾಲೆ ದಕ್ಷಿಣಕ್ಕೆ—ರಥದ ಮಂಟಪ
			2 ಕೋರಮಂಗಲದ ರುದ್ರಪ್ಪ	ಡಿಟೋ	..	29 × 6	...	ಪೂರ್ವಕ್ಕೆ—ಮಾಲೀಕನಮನೆಯ ಮುಖ್ಯವಾದ ಕಟ್ಟಡ ಪಶ್ಚಿಮಕ್ಕೆ—ರೆಡ್ಡಿ ಪ್ಯಾಟೆಗೆ ಹೋಗುವ ರಸ್ತೆ ಉತ್ತರಕ್ಕೆ—ಬಾಗಲೂರು ಮುದ್ದಣ್ಣನಮನೆ ದಕ್ಷಿಣಕ್ಕೆ—ರಥದ ಮಂಟಪ

ನಂ. 11097.—ಯಲ್. ಎಫ್. 257—92—1894ನೇ ಇಸವಿ ಮೈಸೂರು ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಪ್ರಕಾರ ಇದರಿಂದ ಪ್ರಕಟಪಡಿಸುವದೇನಂದರೆ, ಇದರಡಿ ಕಂಡ ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ ಆನೇಕಲ್ಲಿನಲ್ಲಿ ಪೊಂದು ಮುಸಾಫರ್‌ಖಾನೆ ಕಟ್ಟುವ ಬಗ್ಗೆ ಬೇಕಾಗಿರುತ್ತೆ:—

ಜಿಲ್ಲೆ.	ತಾಲ್ಲೂಕು.	ಗ್ರಾಮ.	ಹಿಡುವಳಿದಾರರ ಹೆಸರು.	ಜಮೀನ್ ತಫ್ಸೀಲ್. ವಿವರ.	ಸರ್ವೆ ನಂ.	ಬೇಕಾದ ವಿಸ್ತೀರ್ಣ.	ಕಂದಾಯ.	ಚಕ್ಕುಬಂದಿ.
						ಎ. ಗು.	ರೂ. ಆ. ಪೈ.	
ಬೆಂಗಳೂರು	ಆನೇಕಲ್	ಆನೇಕಲ್ ಕಸಬಾ	ಮೃತಪಟ್ಟ ವಾಗಡಿ ರಾಮಕ್ಕ, ಪಟ್ಟೇದಾರ್ ಕೆಂಪರಾಮನ ಮಗ ಮನ್ನಯ್ಯ ಭೋಗ್ಯೆದಾರ್ ಮೈನರ್	ಖುಷ್ಕಿ	128ನೇ ನಂಬರಿನ ಪೈಕಿ ನಂ. 2	0 20	1 0 0	ಪೂರ್ವಕ್ಕೆ—ಸರ್ವೆ ನಂ. 113 ಮತ್ತು 127 ಪಶ್ಚಿಮಕ್ಕೆ ಸರ್ವೆ ನಂ. 129 ಉತ್ತರಕ್ಕೆ—ಬಿದರಗೆರೆಗೆ ಹೋಗುವ ಟಣಿ ದಕ್ಷಿಣಕ್ಕೆ—ಹೈ ರೋಡ್